ದಿನಾಂಕ 03.01.2023 ರಂದು ಸಾಕ್ಷಿಗೆ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆ :- ವಾದಿ ಪರ:- ಶ್ರೀ ಎ.ಆರ್.ಕೆ. ವಕೀಲರಿಂದ.**

ನಾನು ಈ ದಾವೆಯ ವಾದಿ ಬ್ಯಾಂಕ್ ನ ಶಾಖೆಯಲ್ಲಿ ಮ್ಯಾನೇಜರ್ ಎಂದು ಕೆಲಸ ನಿರ್ವಹಿಸುತ್ತಿದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ ಪ್ರತಿವಾದಿ ಲೋನ್ ಕೋರಿ ಬ್ಯಾಂಕಿಗೆ ಸಲ್ಲಿಸಿದ ಅರ್ಜಿ ಹಾಜರು ಪಡಿಸಿದ್ದು ಅದನ್ನು **ನಿ.ಪಿ.1** ಎಂದು, ಅದರಲ್ಲಿಯ ಪ್ರತಿವಾದಿಯ ಸಹಿಯನ್ನು **ನಿ.ಪಿ.1(a)** ಎಂದು, ಸದರಿ ಅರ್ಜಿಗೆ ಅನುಗುಣವಾಗಿ ಬ್ಯಾಂಕ್ ನವರು ಲೋನ್ ಮಂಜೂರು ಮಾಡಿದ ಬಗ್ಗೆ ಪ್ರತಿವಾದಿಗೆ ಕಳುಹಿಸಿದ ಪತ್ರ ಹಾಜರು ಪಡಿಸಿದ್ದು ಅದನ್ನು **ನಿ.ಪಿ.2** ಎಂದು, ಅದರಲ್ಲಿಯ ಪ್ರತಿವಾದಿಯ ಸಹಿಯನ್ನು **ನಿ.ಪಿ.2(ಎ)** ಎಂದು, ಪ್ರತಿವಾದಿ ಬರೆದು ನೀಡಿದ ಪ್ರಾಮಿಸರಿ ಪತ್ರ, ಲೆಟರ್ ಆಫ್ ಕಂಟಿನ್ಯುಟಿ ಮತ್ತು ಲೆಟರ್ ಆಫ್ ಗ್ಯಾರೆಂಟಿ ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಪಿ.3 ರಿಂದ 5** ಎಂದು, ಅದರಲ್ಲಿಯ ಪ್ರತಿವಾದಿಯ ಸಹಿಗಳನ್ನು ಕ್ರಮವಾಗಿ **ನಿ.ಪಿ.3(ಎ) ಇಂದ 5(ಎ)** ಎಂದು, ಪ್ರತಿವಾದಿ ಬರೆದು ನೀಡಿದ ಹೈಪೋಥಿಕೇಷನ್ ಕರಾರು ಪತ್ರ ಬಡ್ಡಿ ದರ ಒಪ್ಪಿಗೆಯ ಕರಾರು ಪತ್ರ ಮತ್ತು ಲೆಟರ್ ಆಫ್ ಅಂಡರ್ ಟೇಕಿಂಗ್ ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಪಿ.6 ರಿಂದ 8** ಎಂದು, ಅದರಲ್ಲಿಯ ಪ್ರತಿವಾದಿಯ ಸಹಿಗಳನ್ನು ಕ್ರಮವಾಗಿ **ನಿ.ಪಿ.6(ಎ) ಇಂದ 8(ಎ)** ಎಂದು, ಪ್ರತಿವಾದಿಯು ದಿ.05.05.2020 ರಂದು ವಾದಿ ಬ್ಯಾಂಕ್ ಗೆ ಕೊಡಬೇಕಾದ ಬಾಕಿ ಹಣದ ಬಗ್ಗೆ ಒಪ್ಪಿ ಪತ್ರ ನೀಡಿದ್ದು ಅದನ್ನು **ನಿ.ಪಿ.9** ಎಂದು, ಅದರಲ್ಲಿಯ ಪ್ರತಿವಾದಿಯ ಸಹಿಯನ್ನು **ನಿ.ಪಿ.9(ಎ)** ಎಂದು, ಪ್ರತಿವಾದಿಯ ಲೋನ್ ಖಾತೆಗೆ ಸಂಬಂದಿಸಿದಂತೆ ಇರುವ ಒಂದು ಖಾತಾ ಪುರವಣಿಯ ನಕಲು ಪ್ರತಿ ಪ್ರಮಾಣ ಪತ್ರದೊಂದಿಗೆ ಹಾಜರು ಪಡಿಸಿದ್ದು ಅದನ್ನು **ನಿ.ಪಿ.10**

ಎಂದು, ಡಿ.ಎಲ್.ಎಸ್.ಎ ರವರು ನೀಡಿದ ಎನ್.ಎಸ್. ವರದಿ ಹಾಜರು ಪಡಿಸಿದ್ದು ಅದನ್ನು **ನಿ.ಪಿ.11** ಎಂದು ಗುರುತಿಸಲಾಯಿತು. ಈ ದಾವೆಯನ್ನು ನ್ಯಾಯಾಲಯಕ್ಕೆ ಹಾಕಿದ ನಂತರ ಪ್ರತಿವಾದಿ ಬ್ಯಾಂಕಿಗೆ ಎಷ್ಟು ಹಣವನ್ನು ಪಾವತಿಸಿರುವುದಿಲ್ಲ.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ, ದಾವೆಯಲ್ಲಿ ಕೋರಿದಂತೆ ಪ್ರತಿವಾದಿಯ ವಿರುದ್ಧ ಆದೇಶ ಮಾಡಲು ಕೋರುತ್ತೇನೆ.

**ಪಾಟಿ ಸವಾಲು:- ಪ್ರತಿವಾದಿಯ ಪರ:- ಶ್ರೀ ಎ.ಎಸ್.ಎಂ. ವಕೀಲರಿಂದ.**

(ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು, ಪ್ರತಿವಾದಿ ಹಾಜರಿದ್ದು ಕಾಲಾವಕಾಶ ಕೋರುತ್ತಿದ್ದು, ಆದರೆ ಕಡತ ಪರಿಶೀಲಿಸಲಾಗಿ ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸದೆ ಇದ್ದು ಆದರು ನ್ಯಾಯಾಯುತ ದೃಷ್ಟಿಯಿಂದ ಒಂದು ಕಾಲಾವಕಾಶ ನೀಡಿ ಪಾಟಿ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸ.ಇ.ಎ.ಒ.

(ವೀರಣ್ಣ ಸೋಮಶೇಖರ)
11 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.